# *Press Clipping*

The Resource Centre

**Publication** : **Vijaya Karnataka**

**Date** : **June 7, 2016**

**Edition** : **State**

**Page** : **1, Lavalavike**

---

ಸಲ್ಮಾನ್ ಖಾನ್ ಜತೆ ನಟಿಸಲಿದ್ದೇನೆ ಎನ್ನುವ ಸುದ್ದಿ ಸುಳ್ಳು ಎಂದಿದ್ದಾರೆ ದಿವ್ಯಾ ಖೋಸ್ಲಾ ಕುಮಾರ್.

ತಮ್ಮ 'ಉಡ್ತಾ
ಇಲ್ಲಸಲ್ಲದ ವದಂ
ಆಲಿಂ



ಕಿರಣ್ ಶ್ರೀನಿವಾಸ್, ಐಂದ್ರಿತಾ

# ಕನ್ನಡಕ್ಕೆ ಬಂದ ಜಿಟಾರ್ ಖ್ಯಾತಿಯ ನೀಲಾದ್ರಿ

**ಅಪೂರ್ವ ಕಾಸರವಳ್ಳಿ ನಿರ್ದೇಶನದ 'ನಿರುತ್ತರ' ಸಿನಿಮಾದಲ್ಲಿ ನೀಲಾದ್ರಿ ಕುಮಾರ್, ರಸೂಲ್ ಪೂಕುಟ್ಟಿಯಂಥ ದಿಗ್ಗಜರ ಸಮಾಗಮವಾಗಿದೆ. ಕನ್ನಡದ ಮಟ್ಟಿಗೆ ಇಂಥ ಪ್ರತಿಭೆಗಳು ಒಟ್ಟಿಗೆ ಕೆಲಸ ಮಾಡುತ್ತಿರುವುದು ವಿರಳ.**

**ಶರಣು ಹುಲ್ಲೂರು**
sharanappa.adnur@timesgroup.com

ಅಪೂರ್ವ ಕಾಸರವಳ್ಳಿ ನಿರ್ದೇಶನದ 'ನಿರುತ್ತರ' ಚಿತ್ರದಲ್ಲಿ ಜಾಗತಿ ಮಟ್ಟದಲ್ಲಿ ಮಿಂಚಿದ ಕಲಾವಿದರು, ತಂತ್ರಜ್ಞರ ಕೆಲಸ ಮಾಡಿದ್ದಾರೆ.

ಖ್ಯಾತ ಸಿತಾರ್ ವಾದಕ ನೀಲಾದ್ರಿ ಕುಮಾರ್ ಈ ಚಿತ್ರಕ್ಕೆ ಸಂಗೀತ ನೀಡಿದ್ದು, ತಬಲಾ ವಾದಕ ಜಾಕಿರ್ ಹುಸೇನ್, ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಮುಂತಾದವರ ಜತೆ ಕೆಲಸ ಮಾಡಿದ್ದಾರೆ.

ಹಿಂದೂಸ್ತಾನಿಯ ಯುವ ಸಂಗೀತ ಗಾರರಲ್ಲಿ ಅಗ್ರ ಪಂಕ್ತಿ ನಿಲ್ಲುವ ನೀಲಾದ್ರಿ ಸಿತಾರ್ ವಾದ್ಯವನ್ನಿಟ್ಟುಕೊಂಡು ಅನೇಕ ಪ್ರಯೋಗಗಳನ್ನು ಮಾಡಿದ್ದಾರೆ. ಸಾಕಷ್ಟು ಆಲ್ಬಮ್‌ಗಳನ್ನು ಬಿಡುಗಡೆ ಮಾಡಿ ದೇಶ-ವಿದೇಶಗಳಲ್ಲಿ ಹೆಸರು ಮಾಡಿದ್ದಾರೆ.



ಅಪೂರ್ವ ಕಾಸರವಳ್ಳಿ



ನೀಲಾದ್ರಿ ಕುಮಾರ್

ಇದೇ ಮೊದಲಿಗೆ ಕನ್ನಡದ 'ನಿರುತ್ತರ' ಚಿತ್ರದ ಮೂಲಕ ಸಿನಿಮಾ ಸಂಗೀತ ನಿರ್ದೇಶಕರಾಗಿದ್ದಾರೆ. ಅಲ್ಲದೆ, ಸಿತಾರ್ ಮತ್ತು ಗಿಟಾರ್‌ಗಳನ್ನು ಮಿಳಿತಗೊಳಿಸಿ 'ಜಿಟಾರ್' ಎಂಬ ಸಂಗೀತ ಹೊಸ ವಾದ್ಯವನ್ನು ರೂಪಿಸಿದ್ದಾರೆ.

**ರಸೂಲ್ ಪೂಕುಟ್ಟಿ:** ಆಸ್ಕರ್ ಪುರಸ್ಕೃತ ರಸೂಲ್ ಪೂಕುಟ್ಟಿ ಕೂಡ ಈ ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ಗೆ ಬಂದಿದ್ದಾರೆ. ಈ ಚಿತ್ರ ಸಂಗೀತ ಪ್ರಧಾನವಾದ್ದರಿಂದ ಇವರಿಲ್ಲಿ ಸೌಂಡ್ ಮಿಕ್ಸಿಂಗ್ ಮಾಡಿದ್ದಾರೆ. ಇಬ್ಬರ ಕೆಲಸದ ಬಗ್ಗೆ ಸ್ಯಾಂಡಲ್‌ವುಡ್ ಅತೀವ ಕುತೂಹಲದಿಂದ ಕಾಯುತ್ತಿದೆ.

**ರಾಹುಲ್ ಬೋಸ್:** ವಿಭಿನ್ನ ಪಾತ್ರಗಳ ಮೂಲಕ ಮಿಂಚಿರುವ ಬಾಲಿವುಡ್ ನಟ ರಾಹುಲ್ ಬೋಸ್ 'ನಿರುತ್ತರ'ಕ್ಕಾಗಿ ಕನ್ನಡಕ್ಕೆ ಬಂದಿದ್ದಾರೆ. ಶ್ರೀಮಂತ ಉದ್ಯೋಗಿಯ ಪಾತ್ರದಲ್ಲಿ ನಟಿಸಿರು ಇವರು, ತಮ್ಮ ಪಾತ್ರಕ್ಕೆ ತಾವೇ ಡಬ್ ಮಾಡಿದ್ದಾರೆ. ಡಬ್ಬಿಂಗ್ ಮಾಡಲೆಂದೇ ಕನ್ನಡವನ್ನೂ ಕಲಿತಿದ್ದಾರೆ.



ರಸೂಲ್ ಪುಕುಟ್ಟಿ

ಕ್ಷಾಮ, ಶಾಂತಿ ಹೀಗೆ ಅನೇಕ ಚಿತ್ರಗಳ ಮೂಲಕ ರಾಷ್ಟ್ರ ಮಟ್ಟದಲ್ಲಿ ಮಿಂಚಿರುವ ಭಾವನಾ ರಾಮಣ್ಣ ಈ ಸಿನಿಮಾದ ನಿರ್ಮಾಪಕಿ. ಅಲ್ಲದೇ ನಡು ವಯಸ್ಕ ಮಹಿಳೆಯ ಪಾತ್ರವನ್ನೂ ಮಾಡಿದ್ದಾರೆ. ಅವರ ಸಹೋದರ ಅರವಿಂದ್ ರಾಮಣ್ಣ ಜತೆಯಾಗಿ 'ಹೋಂ ಟೌನ್' ಬ್ಯಾನರಿನಡಿಯಲ್ಲಿ ನಿರ್ಮಿಸಿರುವ ಮೊದಲ ಸಿನಿಮಾ ಇದು. ಅಪರೂಪದ ನಿರ್ದೇಶಕರಲ್ಲಿ ಗಿರೀಶ್ ಕಾಸರವಳ್ಳಿ ಅವರ ಪುತ್ರ ಅಪೂರ್ವ ಕಾಸರವಳ್ಳಿ ಸ್ವತಂತ್ರ ನಿರ್ದೇಶಕರಾಗುತ್ತಿದ್ದಾರೆ. ಅಲ್ಲದೇ, ಕನ್ನಡದ ಅನೇಕ ಸಿನಿಮಾಗಳಲ್ಲಿ ನಟಿಸಿ, ಬಾಲಿವುಡ್‌ಗೆ ಹಾರಿದ್ದ ಕಿರಣ್ ಶ್ರೀನಿವಾಸ್ ತುಂಬಾ ಸಮಯದ ನಂತರ ಮತ್ತೆ ಕನ್ನಡ ಚಿತ್ರರಂಗಕ್ಕೆ ಬಂದಿದ್ದಾರೆ. ಐಂದ್ರಿತಾ ರೇ ಸೇರಿದಂತೆ ಸಾಕಷ್ಟು ಕಲಾವಿದರು ತಾರಾಬಳಗದಲ್ಲಿದ್ದಾರೆ.

ಇದು ಗಾಂಧಿನಗರದ ಸಿದ್ಧ ಸೂತ್ರಗಳನ್ನು ಪಕ್ಕಕ್ಕಿಟ್ಟು ಮಾಡಿರುವ ವಿಭಿನ್ನ ಸಿನಿಮಾ. ಸಂಬಂಧಗಳ ನಡುವಿನ ಭಾವನಾತ್ಮಕವಾದ ಸೂಕ್ಷ್ಮ ಅಂಶಗಳನ್ನು ಚಿತ್ರದ ಮೂಲಕ ಹೇಳಲು ಹೊರಟಿದ್ದಾರೆ ನಿರ್ದೇಶಕರು. ನಾಲ್ವರು ವ್ಯಕ್ತಿಗಳ ಭಾವನೆಗಳ ತಾಕಲಾಟವೇ ಸಿನಿಮಾದ ಎಳೆ. ■